

ಸಮಾಜ ವಿಜ್ಞಾನದ ಇಬ್ಬರು ಅಧ್ಯಾಪಕರು ಹೋಟೆಲ್ ಒಂದರಲ್ಲಿ ಕಾಫಿ ಕುಡಿಯುತ್ತಾ ಮಾತಿನಲ್ಲಿ ತೊಡಗಿದ್ದರು.

ಅ: ಇದೊಂದು ಕಾಯಿಲೆ ಅಂತ ನಿನಗೆ ಅನಿಸಲ್ಲಾ?

ಆ: ಹೌದು ಬದುಕಕ್ಕೂ ಬಿಡಲ್ಲ ಸಾಯೋದೂ ಇಲ್ಲ. ನಿರಂತರ ಅಶಾಂತಿ... ನೆಮ್ಮದಿ ಇಲ್ಲ... ಪ್ರತಿಕ್ಷಣ ನೋವು... ಬಾವು ಇಳಿಯುವುದೇ ಇಲ್ಲ...

ಅ: ಅಸ್ಪೃಶ್ಯತೆ, ಭಿನ್ನಭೇದ, ಅನ್ಯ ಕೋಮು ದ್ವೇಷ, ಭಾಷಾ ಮೇಲರಿಮೆ, ಜಾತಿ ಅಹಂಕಾರ...ಎಲ್ಲಾ ಒಂದೇ ಕೆಟಗರಿ...

ಆ: ಗುಳಿಗೆ ಕಷಾಯ ಆಪರೇಷನು ಶಾಕ್ ಟ್ರೀಟ್ಮೆಂಟು ಫೇಲ್ ಆಗಿದೆ.

ಅ: ಹೊಸ ಹುಡುಗರು ಹೊಸ ಚುಚ್ಚುಮದ್ದು ಕಂಡು ಹಿಡಿಯಬೇಕು...

ಆ: ಇದಕ್ಕೆ ಬೇರೆಯವರು ಮದ್ದು ಕಂಡುಹಿಡಿಯೊಕೆ ಆಗಲ್ಲ... ಅಗದಿ ನಮ್ದೇ ಲೋಕಲ್ ಕಾಯಿಲೆ ನಾವೇ ಮದ್ದು ಕಂಡು ಹಿಡಿಬೇಕು...

ಅ: ಏನು ಮಾಡೋದು ಕಾಯಿಲೆ ಬಿದ್ರೇನೇ ಒಳ್ಳೆಯದು ಅಂತ ಅನ್ನಿಸಿಬಿಟ್ಟಿದೆ... ಸ್ವತಃ ಕಾಯಿಲೆಗೇ ವಾಸಿ ಆಗಲು ಇಷ್ಟ ಇಲ್ಲ ಅಂತ ಅನಿಸುತ್ತೆ.... ಗಮನ ಕೊಡ್ತಾರೆ... ಮುದ್ದು ಮಾಡ್ತಾರೆ... ಬ್ರೆಡು ಹಾಲು ಹಣ್ಣು... ಹಹಹ ಸಾಕಿಕೊಂಡೇ ಬಂದಿರುವೆವು...

ಆ: ಹುಟ್ತಾನೆ ಅಮರಿಕೊಂಡಿರೊ ಕಾಯಿಲೆ... ಜೀನ್ ನಲ್ಲೇ ಇದೆಯೋ ಏನೋ....

ದೊಡ್ಡ ಮೆರವಣಿಗೆಯೊಂದು ಇವರು ಕೂತಿದ್ದ ಹೋಟೆಲು ಮುಂದಿನಿಂದಲೇ ಹಾದು ಹೋಯಿತು... ಹೋಟೆಲಿನ ಗೇಟು ಮುಚ್ಚಿ ಐದು ನಿಮಿಷಗಳ ನಂತರ ತೆರೆಯಲಾಯಿತು.

ಇಬ್ಬರೂ ಬಿಲ್ಲು ತೆತ್ತು ಹೊರಗೆ ಬಂದರು.

ರಸ್ತೆಯಲ್ಲಿ ಟೈರಿಗೆ ಬೆಂಕಿ ಹಾಕಿದ್ದರು. ಯಾರದ್ದೋ ಪ್ರತಿಕೃತಿ ದಹನ... ಯಾರದ್ದೋ?... ಇಬ್ಬರೂ ಮುಖ ಮುಖ ನೋಡಿಕೊಂಡರು... ತಮ್ಮ ತಮ್ಮ ಕಾರಿನತ್ತ ನಡೆದರು.

ಗಲ್ಲದ ಮೇಲೆ ಕೂತ ಮಾಲೀಕ ರೊಕ್ಕ ಎಣಿಸುತ್ತಿದ್ದ.

ಗ್ರಾಹಕರು ತಿನ್ನುವುದರಲ್ಲಿ ಮಗ್ನರಾಗಿದ್ದರು.